ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

UNIVERSITY OF HORTICULTURAL SCIENCES, BAGALKOT

ದಿನಾಂಕ 28-08-2020 ರಂದು ಬೆಳಿಗ್ಗೆ 11.00 ಗಂಟೆಗೆ ಸಭಾ ಭವನ, ತೋಟಗಾರಿಕೆ ಮಹಾವಿದ್ಯಾಲಯ, ಜಿಕೆವಿಕೆ ಆವರಣ, ಬೆಂಗಳೂರು-560 065 ಇಲ್ಲಿ ಜರುಗಿದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 57ನೇ ಸಭೆಯ ನಡುವಳಿಗಳು.

MINUTES OF 57TH MEETING OF THE BOARD OF MANAGEMENT, UHS, BAGALKOT HELD ON 28-08-2020 AT 11.00 A.M. IN MEETING HALL, COLLEGE OF HORTICULTURE, GKVK CAMPUS, BENGALURU - 560 065.

ಹಾಜರಿದ್ದ ಸದಸ್ಯರು

**Members present**

| | | | |
|---|---|---|---|
| 1. | ಡಾ. ಕೆ. ಎಂ. ಇಂದಿರೇಶ<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ,<br>ತೋವಿವಿ, ಬಾಗಲಕೋಟ. | : | ಅಧ್ಯಕ್ಷರು |
| | **Dr. K. M. Indiresh**<br>Vice-Chancellor and Chairman<br>Board of Management, UHS, Bagalkot. | : | Chairman |
| 2. | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ.<br>ಸರ್ಕಾರದ ಕಾರ್ಯದರ್ಶಿಗಳು ಹಾಗೂ ಸದಸ್ಯರು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೋಟಗಾರಿಕೆ ಇಲಾಖೆ, ಎಂ. ಎಸ್. ಬಿಲ್ಡಿಂಗ್, ಬೆಂಗಳೂರು-560 001. | : | ಸದಸ್ಯರು |
| | **Sri Rajender Kumar Kataria,** I.A.S.,<br>Secretary to Government and Member,<br>Board of Management, UHS, Bagalkot, Department of Horticulture, M.S. Building, Bengaluru-560001. | : | Member |
| 3. | ಶ್ರೀಮತಿ ಪದ್ಮಾವತಿ<br>ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಪ್ರತಿನಿಧಿಗಳು ಮತ್ತು<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು-560 001. | : | ಸದಸ್ಯರು |
| | **Mrs. Padmavathi**<br>Additional Secretary to Government,<br>Dept. of Finance, Representative of Principal Secretary Govt. and Member,<br>Board of Management, UHS, Bagalkot, Department of Finance, Vidhana Soudha, Bengaluru-560001. | : | Member |
| 4. | ಡಾ. ಹೆಚ್. ಎನ್. ಖೇರ<br>ಕುಲಪತಿಗಳು<br>ಗೋಕುಲ ಗ್ಲೋಬಲ್ ವಿಶ್ವವಿದ್ಯಾಲಯ, ಅಹದಾಬಾದ, ಗುಜರಾತ್<br>ಮತ್ತು ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಐ. ಓ. ಸಿ. ಡಿಪೋ ಎದುರುಗಡೆ, ರಾಜ್ಯ ಹೆದ್ದಾರಿ 41,<br>ಸಿದ್ದಪೂರ-384151, ಗುಜರಾತ್, ಭಾರತ. | : | ಸದಸ್ಯರು |
| | **Dr. H. N. Kher**<br>Vice-Chancellor<br>Gokul Global University, Ahmedabad, Gujarat and Hon'ble Member, BOM, UHS, Bagalkot<br>Opp. I.O.C. Depot, Near Sujanpur Patia, State Highway 41, Siddhpur-384151, Gujarat, India | : | Member |

| | | | |
|---|---|---|---|
| | ಶ್ರೀ ಎಸ್. ಎನ್. ಮಂಜುನಾಥಗೌಡ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ ದಳಸನೂರು,<br>ಮದನಹಳ್ಳಿ ಪಂಚಾಯಿತು–563126, ತಾಲ್ಲೂಕು ಮತ್ತು ಜಿಲ್ಲೆ: ಕೋಲಾರ. | : | ಸದಸ್ಯರು |
| 5. | **Sri S. N. Manjunathagowda**<br>S/o. Late Nanjappa<br>Member, Board of Management,<br>UHS, Bagalkot<br>Shettymadamangala Village, Velagalaburre Post, Via Dalasanur, Madanahally Panchayath-563126,<br>Tq & Dist : Kolar. | : | Member |
| | ಶ್ರೀ ಆರ್. ಎಂ. ನಾಗೇಶ್<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ನಂ. 25, ಜುಬಿಲಿ ಶಾಲೆ ಹತ್ತಿರ, ಪಾಪರೆಡ್ಡಿಪಾಳ್ಯ, ನಾಗರಬಾವಿ, ಬೆಂಗಳೂರು–560 072. | : | ಸದಸ್ಯರು |
| 6. | **Sri R. M. Nagesh**<br>Member, Board of Management,UHS,Bagalkot<br>No. 25, Near Jubilee School, Papareddy Palya,<br>Nagarbhavi, Bengaluru-560 072. | : | Member |
| | ಶ್ರೀ ಯೋಗಿರಾಜ ಬಿ. ಪಾಟೀಲ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 142, "ಸದ್ಗುರು", 5ನೇ ಕ್ರಾಸ್, ಕುಸುಮನಗರ ಮುಖ್ಯ ರಸ್ತೆ, ವೈದ್ಯ ಮಠ ಸಂಕೀರ್ಣ ಹಿಂದುಗಡೆ, ಧಾರವಾಡ–580008. | : | ಸದಸ್ಯರು |
| 7. | **Dr. Yogiraj B. Patil**<br>Member, Board of Management, UHS, Bagalkot<br>No. 142, "Sadguru", 5th Cross<br>Kusumnagar Main Road, Backside of Vaidya Math Complex, Dharwad-580008. | : | Member |
| | ಡಾ. ಕೆ. ಎಮ್. ಇಂದಿರೇಶ<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ. | : | ಸದಸ್ಯರು |
| 8. | **Dr. K. M. Indiresh**<br>Director of Education and Member<br>Board of Management, UHS, Bagalkot. | : | Member |
| | ಡಾ. ಟಿ. ಬಿ. ಅಳ್ಳೊಳ್ಳಿ<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ. | : | ಸದಸ್ಯ ಕಾರ್ಯದರ್ಶಿಗಳು |
| 9. | **Dr. T. B. Allolli**<br>Registrar & Member-Secretary,<br>Board of Management, UHS, Bagalkot. | : | Member Secretary |

ವಿಡಿಯೋ ಕಾನ್ಫರೆನ್ಸ ಮೂಲಕ ಹಾಜರಿದ್ದ ಸದಸ್ಯರು

**Members present through video conference**

| | | | |
|---|---|---|---|
| 10. | **ಡಾ. ಬಿ. ವೆಂಕಟೇಶ, ಭಾ.ಅ.ಸೇ.,**<br>ತೋಟಗಾರಿಕೆ ನಿರ್ದೇಶಕರು ಮತ್ತು ಸದಸ್ಯರು, ವ್ಯವಸ್ಥಾಪನಾ ಮಂಡಳಿ,<br>ತೋವಿವಿ, ಬಾಗಲಕೋಟ, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್,<br>ಬೆಂಗಳೂರು-560004. | : | ಸದಸ್ಯರು |
| | **Dr. B. Venkatesh,** I.F.S.,<br>Director of Horticulture and Member,<br>Board of Management, UHS Bagalkot,<br>Dept.of Horticulture, Lalbagh,Bengaluru-560004. | : | Member |
| 11. | **ಶ್ರೀ ಶಂಕರಪ್ಪ ಬಸಪ್ಪ ಮಳಲಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮು:ಪೋ: ಉತೂರು, ತಾ: ಮುಧೋಳ, ಜಿ: ಬಾಗಲಕೋಟ | : | ಸದಸ್ಯರು |
| | **Sri. Shankarappa Basappa Malali**<br>Member,Board of Management,UHS, Bagalkot<br>Mu:Po: Utturu, Mudhol Taluka, Dist: Bagalkot | : | Member |
| 12. | **ಶ್ರೀಮತಿ ಕಸ್ತೂರಿ ತವನಪ್ಪ ಅಷ್ಟಗಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶಿವನಗರ, ಸವದತ್ತಿ ರಸ್ತೆ, ಮುರುಘಾ ಮಠದ ಹತ್ತಿರ, ಧಾರವಾಡ-581208. | : | ಸದಸ್ಯರು |
| | **Smt. Kasturi Tavanappa Astagi**<br>Member, Board of Management, UHS, Bagalkot,<br>Shivanagar, Savadatti Road,Near Muruga Math,<br>Dharwad-581208. | : | Member |

ಆರಂಭದಲ್ಲಿ, ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು ವ್ಯವಸ್ಥಾಪನ ಮಂಡಳಿಯ 57ನೇ ಸಭೆಗೆ ಅಧ್ಯಕ್ಷರು ಹಾಗೂ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಹೊಸದಾಗಿ ಸದಸ್ಯರಾಗಿ ನಾಮನಿರ್ದೇಶನಗೊಂಡು ಮೊದಲ ಸಲ ಸಭೆಗೆ ಹಾಜರಾದ ಡಾ. ಹೆಚ್. ಎನ್. ಖೇರ ಇವರಿಗೆ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಗಳು ಮತ್ತು ಇತರೆ ಸದಸ್ಯರುಗಳು ಸನ್ಮಾನಿಸಿದರು. ಮುಂದುವರೆದು, ಖಾಯಂ ಕುಲಪತಿಗಳಾಗಿ ನೇಮಕಗೊಂಡು ಮೊದಲ ಬಾರಿ ಸಭೆಗೆ ಹಾಜರಾದ ಡಾ. ಕೆ. ಎಂ. ಇಂದಿರೇಶ್ ಇವರನ್ನು ಡಾ. ವೈ. ಬಿ. ಪಾಟೀಲ ಇವರ ನೇತೃತ್ವದಲ್ಲಿ ಎಲ್ಲ ಸದಸ್ಯರುಗಳು ಸನ್ಮಾನಿಸಿದರು. ಕುಲಸಚಿವರು ಗೌರವಾನ್ವಿತ ಕುಲಪತಿಗಳು ಹಾಗೂ ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು, ಇದಕ್ಕೆ ಅಧ್ಯಕ್ಷರು ಸಮ್ಮತಿಸಿದರು. ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳ ಮೇಲೆ ಸುದೀರ್ಘ ಚರ್ಚೆಗಳನ್ನು ಕೈಗೆತ್ತಿಕೊಂಡು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, the Registrar and Member Secretary welcomed Chairman and members of the Board of Management to the 57th meeting. The Chairman and Member Secretary and also other members felicitated Dr. H. N. Kher, who was nominated as member (newly) and attended the meeting for the first time. Further, all the members under the leadership of Dr. Y. B. Patil have felicitated the Dr. K. M. Indiresh, who was attended the meeting first time after becoming regular Vice-Chancellor. The Registrar requested the Hon'ble Vice Chancellor and Chairman to chair the meeting and to conduct the deliberations as per the agenda for discussion. After the detailed deliberations and discussions on the agenda subjects, the following decisions were resolved during the Board meeting.

| | |
|---|---|
| ಕಾರ್ಯಸೂಚಿ ಸಂ. 1 | ದಿನಾಂಕ **08.01.2020** ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 54ನೇ ಸಭೆಯ ನಡುವಳಿಗಳ ಧೃಢೀಕರಣ. |
| | **ಚರ್ಚೆ ಮತ್ತು ಠರಾವು :**<br>ದಿನಾಂಕ 08.01.2020 ರಂದು ಜರುಗಿದ ವ್ಯವಸ್ಥಾಪನಾ ಮಂಡಳಿಯ 54ನೇ ಸಭೆಯ ನಡುವಳಿಗಳ ಮೇಲೆ ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲರವರಿಂದ ಸ್ವೀಕೃತಗೊಂಡ ಆಕ್ಷೇಪಣೆಯನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಮಂಡಿಸಿದರು. ಚರ್ಚೆಯ ನಂತರ, ದಿನಾಂಕ 08.01.2020 ರಂದು ಜರುಗಿದ ವ್ಯವಸ್ಥಾಪನಾ ಮಂಡಳಿಯ 54ನೇ ಸಭೆಯ ನಡುವಳಿಗಳನ್ನು ಮಂಡಳಿಯು ದೃಢೀಕರಿಸಿತು. |
| **Item No.1** | **Confirmation of the minutes of the 54th meeting of the Board of Management held on 08.01.2020 .** |
| | **Discussion and Resolution :**<br>The comments received from Dr. Y. B. Patil, Hon'ble Member on the minutes of 54th meeting of Board of Management were presented in the meeting by the Member Secretary. After discussion, Board confirmed the minutes of the 54th meeting of Board of Management held on 08.01.2020. |
| ಕಾರ್ಯಸೂಚಿ ಸಂ. 2 | ದಿನಾಂಕ **08.01.2020** ರಂದು ನಡೆದ ತೋವಿವಿ, ಬಾಗಲಕೋಟೆಯ ವ್ಯವಸ್ಥಾಪನಾ ಮಂಡಳಿಯ 54ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮ. |
| | **ಚರ್ಚೆ ಮತ್ತು ಠರಾವು :**<br>ದಿನಾಂಕ 08.01.2020 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 54ನೇ ಸಭೆಯ ನಿರ್ಧಾರ ಹಾಗೂ ತೀರ್ಮಾನಗಳ ಮೇಲೆ ಕ್ರಮ ಕೈಗೊಂಡ ವರದಿಯನ್ನು ಸಭೆಗೆ ಮಂಡಿಸಲಾಯಿತು. ಚರ್ಚೆಯ ನಂತರ, ಮಂಡಳಿಯು ಸದರಿ ಕ್ರಮಗಳಿಗೆ ತನ್ನ ಅನುಮೋದನೆಯನ್ನು ನೀಡಿತು. |
| **Item No.2** | **Action taken report on the minutes of the 54th meeting of Board of Management held on 08.01.2020.** |
| | **Discussion and Resolution :**<br>The Board perused the action taken report on the minutes of the 54th meeting of Board of Management held on 08.01.2020 and expressed its consent over the progress made. The Board accorded its approval for the actions taken. |
| ಕಾರ್ಯಸೂಚಿ ಸಂ. 3 | ದಿನಾಂಕ **27.02.2020** ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 55ನೇ ಸಭೆಯ ನಡುವಳಿಗಳ ಧೃಢೀಕರಣ. |
| | **ಚರ್ಚೆ ಮತ್ತು ಠರಾವು :**<br>ದಿನಾಂಕ 27.02.2020 ರಂದು ಜರುಗಿದ ವ್ಯವಸ್ಥಾಪನಾ ಮಂಡಳಿಯ 55ನೇ ಸಭೆಯ ನಡುವಳಿಗಳ ಮೇಲೆ ನಿಗದಿಪಡಿಸಿದ ದಿನಾಂಕದೊಳಗೆ ಯಾವುದೇ ಸದಸ್ಯರಿಂದ ಸಲಹೆಗಳು/ಟಿಪ್ಪಣಿಗಳು ಸ್ವೀಕೃತವಾಗದ ಕಾರಣ, ಸಭೆಯ ನಡುವಳಿಗಳನ್ನು ಅಳವಡಿಸಿಕೊಳ್ಳಲು ದೃಢೀಕರಿಸಲಾಯಿತು. |
| **Item No.3** | **Confirmation of the minutes of the 55th meeting of the Board of Management held on 27.02.2020 .** |
| | **Discussion and Resolution :**<br>As there were no comments received from any of the members within the stipulated date, the minutes of the 55th meeting of Board of Management held on 27.02.2020 were confirmed for adoption. |

| | |
|---|---|
| ಕಾರ್ಯಸೂಚಿ ಸಂ. 4 | **ದಿನಾಂಕ 27.02.2020 ರಂದು ನಡೆದ ತೋವಿವಿ, ಬಾಗಲಕೋಟೆಯ ವ್ಯವಸ್ಥಾಪನಾ ಮಂಡಳಿಯ 55ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮ.** |
| | **ಚರ್ಚೆ ಮತ್ತು ಠರಾವು :** ದಿನಾಂಕ 27.02.2020 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 55ನೇ ಸಭೆಯ ನಿರ್ಧಾರ ಹಾಗೂ ತೀರ್ಮಾನಗಳ ಮೇಲೆ ಕ್ರಮ ಕೈಗೊಂಡ ವರದಿಯನ್ನು ಸಭೆಗೆ ಮಂಡಿಸಲಾಯಿತು. ಚರ್ಚೆಯ ನಂತರ, ಮಂಡಳಿಯು ಸದರಿ ಕ್ರಮಗಳಿಗೆ ತನ್ನ ಅನುಮೋದನೆಯನ್ನು ನೀಡಿತು. |
| **Item No.4** | **Action taken report on the minutes of the 55th meeting of Board of Management held on 27.02.2020.** |
| | **Discussion and Resolution :** The Board perused the action taken report on the minutes of the 55th meeting of Board of Management held on 27.02.2020 and expressed its consent over the progress made. The Board accorded its approval for the actions taken. |
| ಕಾರ್ಯಸೂಚಿ ಸಂ. 5 | **ದಿನಾಂಕ 05.05.2020 ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 56ನೇ (ತುರ್ತು) ಸಭೆಯ ನಡುವಳಿಗಳ ಧೃಢೀಕರಣ.** |
| | **ಚರ್ಚೆ ಮತ್ತು ಠರಾವು :** ದಿನಾಂಕ 05.05.2020 ರಂದು ಜರುಗಿದ ವ್ಯವಸ್ಥಾಪನಾ ಮಂಡಳಿಯ 56ನೇ (ತುರ್ತು) ಸಭೆಯ ನಡುವಳಿಗಳ ಮೇಲೆ ನಿಗದಿಪಡಿಸಿದ ದಿನಾಂಕದೊಳಗೆ ಯಾವುದೇ ಸದಸ್ಯರಿಂದ ಸಲಹೆಗಳು/ಟಿಪ್ಪಣಿಗಳು ಸ್ವೀಕೃತವಾಗದ ಕಾರಣ, ಸಭೆಯ ನಡುವಳಿಗಳನ್ನು ಅಳವಡಿಸಿಕೊಳ್ಳಲು ದೃಢೀಕರಿಸಲಾಯಿತು. |
| **Item No.5** | **Confirmation of the minutes of the 56th (Emergent) meeting of the Board of Management held on 05.05.2020 .** |
| | **Discussion and Resolution :** As there were no comments received from any of the members within the stipulated date, the minutes of the 56th (Emergent) meeting of Board of Management held on 05.05.2020 were confirmed for adoption. |
| ಕಾರ್ಯಸೂಚಿ ಸಂ. 6 | **ದಿನಾಂಕ 27.02.2020 ರಂದು ನಡೆದ ತೋವಿವಿ, ಬಾಗಲಕೋಟೆಯ ವ್ಯವಸ್ಥಾಪನಾ ಮಂಡಳಿಯ 56ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮ.** |
| | **ಚರ್ಚೆ ಮತ್ತು ಠರಾವು :** ದಿನಾಂಕ 05.05.2020 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 56ನೇ (ತುರ್ತು) ಸಭೆಯ ನಿರ್ಧಾರ ಹಾಗೂ ತೀರ್ಮಾನಗಳ ಮೇಲೆ ಕ್ರಮ ಕೈಗೊಂಡ ವರದಿಯನ್ನು ಸಭೆಗೆ ಮಂಡಿಸಲಾಯಿತು. ಚರ್ಚೆಯ ನಂತರ, ಮಂಡಳಿಯು ಸದರಿ ಕ್ರಮಗಳಿಗೆ ತನ್ನ ಅನುಮೋದನೆಯನ್ನು ನೀಡಿತು. |
| **Item No.6** | **Action taken report on the minutes of the 56th (Emergent) meeting of Board of Management held on 05.05.2020.** |
| | **Discussion and Resolution :** The Board perused the action taken report and expressed its consent over the progress made. The Board accorded its approval for the actions taken. |
| ಕಾರ್ಯಸೂಚಿ ಸಂ. 7 | **ಸಿ.ಎ.ಎಸ್.2006 ರ ಅಡಿಯಲ್ಲಿ ಶಿಕ್ಷಕರಿಗೆ ಉನ್ನತೀಕರಿಸಲು ಅನುಮೋದನೆಗಾಗಿ ಕುರಿತು.** |
| | **ಚರ್ಚೆ ಮತ್ತು ಠರಾವು :** ತುಂಬಾ ದಿನಗಳಿಂದ ಬಾಕಿ ಇರುವ ಈ ವಿಷಯವನ್ನು ಸುದೀರ್ಘವಾಗಿ ಚರ್ಚಿಸಲಾಯಿತು. ಸಿಎಎಸ್ 2006 ರ ಪದೋನ್ನತಿಗಳ ಸೌಲಭ್ಯಗಳನ್ನು ವಿಸ್ತರಿಸುವ ಬಗ್ಗೆ ಸದಸ್ಯರುಗಳಲ್ಲಿ ಒಮ್ಮತ ಮೂಡಿಸಲಾಯಿತು. ಮುಂದುವರೆದು, ಎಲ್ಲ ಸೀಲು ಮಾಡಿರುವ ಲಕೋಟೆಗಳನ್ನು ತೆರೆಯಲಾಯಿತು ಮತ್ತು ನಿಯಮಾನುಸಾರ ಎಲ್ಲ ಸದಸ್ಯರುಗಳ ಗಮನಕ್ಕೆ ತರಲಾಯಿತು. |

<table>
<tr>
<td></td>
<td>
ಆರ್ಥಿಕ ಸೌಲಭ್ಯಗಳನ್ನು ಹಿಂದಿನ ದಿನಾಂಕದಿಂದ ಅಂದರೆ ಅರ್ಹತಾ ದಿನಾಂಕದಿಂದ ಅಥವಾ ಮುಂದಿನ ದಿನಾಂಕದಿಂದ ಅಂದರೆ ಕಾರ್ಯನಿರ್ವಹಣಾ ವರದಿ ಸಲ್ಲಿಸಿದ ದಿನಾಂಕದಿಂದ ವಿಸ್ತರಿಸುವ ಕುರಿತು ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ ಮತ್ತು ಇತರೆ ಸದಸ್ಯರು ಕೆಲವು ಸ್ಪಷ್ಟೀಕರಣಗಳನ್ನು ಕೇಳಿದರು. ಆರ್ಥಿಕ ಸೌಲಭ್ಯಗಳನ್ನು ವಿಸ್ತರಿಸುವ ಕುರಿತಂತೆ ಸರ್ಕಾರದ ಆದೇಶ ದಿನಾಂಕ 24.03.2010 ರಲ್ಲಿಯ ಅವಕಾಶಗಳನ್ನು ಸದಸ್ಯರುಗಳ ಗಮನಕ್ಕೆ ತರಲಾಯಿತು. ಸುದೀರ್ಘ ಚರ್ಚೆಗಳ ನಂತರ, ಮಂಡಳಿಯು ಸಿಎಎಸ್ 2006 ರ ಅಡಿಯಲ್ಲಿ ಶಿಕ್ಷಕರುಗಳಿಗೆ ಉನ್ನತೀಕರಣಗೊಳಿಸುವ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು ಮತ್ತು ಶಿಕ್ಷಕರುಗಳು ಅರ್ಹತೆಯನ್ನು ಹೊಂದಿದ ದಿನಾಂಕದಿಂದ ಆರ್ಥಿಕ ಸೌಲಭ್ಯಗಳನ್ನು ವಿಸ್ತರಿಸಲು ನಿರ್ದೇಶಿಸಿತು. ಸರ್ಕಾರದ ಆದೇಶ ದಿನಾಂಕ 24.03.2010 ರಲ್ಲಿ ಸೌಲಭ್ಯಗಳನ್ನು ಮುಂದಿನ ದಿನಾಂಕದಿಂದ ಅಂದರೆ ಶಿಕ್ಷಕರುಗಳು ಕಾರ್ಯನಿರ್ವಹಣಾ ವರದಿ ಸಲ್ಲಿಸಿದ ದಿನಾಂಕದಿಂದ ವಿಸ್ತರಿಸಬೇಕಾಗಿರುತ್ತದೆ. ಆದಾಗ್ಯೂ ಈ ತರಹದ ಸೌಲಭ್ಯಗಳನ್ನು ಐಸಿಎಆರ್‌ನ ವಿವಿಧ ಸಂಸ್ಥೆಗಳಲ್ಲಿ ಮತ್ತು ರಾಜ್ಯದ ಇತರೆ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅರ್ಹತಾ ದಿನಾಂಕದಿಂದ ವಿಸ್ತರಿಸಲಾಗಿರುತ್ತದೆ. ಸಿಎಎಸ್ 2006 ರ ಅನುಷ್ಠಾನ ಪ್ರಕ್ರೀಯೆಗಳಲ್ಲಿ ಕೆಲವು ವಿಳಂಬವಾಗಿದ್ದು, ಇದರಿಂದಾಗಿ ಕೆಲವು ಶಿಕ್ಷಕರುಗಳು ಕಾರ್ಯನಿರ್ವಹಣಾ ವರದಿಗಳನ್ನು ಅರ್ಹತಾ ದಿನಾಂಕದ ನಂತರ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ವ್ಯವಸ್ಥಾಪನಾ ಮಂಡಳಿಯು ಸಿಎಎಸ್ 2006 ರ ಅಡಿಯಲ್ಲಿ ಶಿಕ್ಷಕರುಗಳ ಪದೋನ್ನತಿ ನೀಡುವ ಪ್ರಸ್ತಾವನೆ ಅರ್ಹತಾ ದಿನಾಂಕದಿಂದ ಅನ್ವಯವಾಗುವಂತೆ ಒಂದು ಬಾರಿಗೆ ಮಾತ್ರ (one time settlement) ತನ್ನ ಅನುಮೋದನೆ ನೀಡಿತು. ಆದಾಗ್ಯೂ, ಕೆಲವು ಸದಸ್ಯರುಗಳು ಈ ಕೆಳಗೆ ತಿಳಿಸಿರುವ ಶಿಕ್ಷಕರುಗಳ ಪದೋನ್ನತಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಣಾ ವರದಿಗಳನ್ನು ಪುನರ್ ಪರಿಶೀಲಿಸಲು ತಿಳಿಸಿದರು.<br>
1. ಡಾ. ಮೊಹಮ್ಮದ ಫಾರೂಕ<br>
2. ಡಾ. (ಶ್ರೀಮತಿ) ಬಿ. ಸಿ. ಪಾಟೀಲ<br>
3. ಡಾ. ಶಶಿಕುಮಾರ ಎಸ್.<br>
4. ಡಾ. ಆರ್. ಎಸ್. ಹಿರೇಮಠ<br>
5. ಡಾ. ಜಿ. ಬಸವರಾಜ<br>
ಈ ಮೇಲೆ ತಿಳಿಸಿರುವ ಅಂಶಗಳ ಹಿನ್ನೆಯಲ್ಲಿ, ಕಾರ್ಯಸೂಚಿಯಲ್ಲಿ ಮಂಡಿಸಿದಂತೆ (ಈ ಮೇಲಿನ ಅ. ನಂ. 1 ರಿಂದ 5 ಹೊರತುಪಡಿಸಿ) ಅರ್ಹ ಶಿಕ್ಷಕರುಗಳಿಗೆ ಪದೋನ್ನತಿ ಆದೇಶಗಳನ್ನು ಹೊರಡಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು)<br>
(ಕ್ರಮ: ಕುಲಸಚಿವರು)
</td>
</tr>
<tr>
<td>Item No.7</td>
<td>Approval for up-gradation of teachers under CAS-2006 Scheme.</td>
</tr>
<tr>
<td></td>
<td>
Discussion and Resolution :<br>
There was a lengthy discussion about this issue, which was pending since long time. There was a consensus among members of the Board to extend the benefits of CAS-2006 promotions. Further, all sealed covers were opened and shown to the members in the meeting by following procedures.<br>
The Secretary to Government, Department of Horticulture, GoK and other members have sought several clarifications regarding extending the financial benefits retrospectively i.e., date of eligibility or prospectively i.e., date of submission of work done report respectively. The provisions of GO dated 24.03.2010 were brought to the kind notice of the members regarding extending financial benefits. After detailed deliberations, Board has accorded its approval for up-gradation of teachers under CAS-2006 Scheme and further directed the University to extend the financial benefits retrospectively i.e., date on which the teachers became eligible. Similar benefits have been extended by various institutes of ICAR and other farm universities in Karnataka,
</td>
</tr>
</table>

| | |
|---|---|
| | though G.O. dated 24.03.2010 specifies that the benefit should be extended prospectively i.e., date of submission of work done report. While implementing this scheme there are some procedural delays have occurred, as a result of this some of the teachers have submitted their Bio-data later than their date of eligibility. In view of this, the BOM has accorded its approval for promotion of teachers under CAS with retrospective effect as one time settlement. However, some of the Members have expressed their concern regarding promotion of teachers, whose bio-data may be reviewed once again. These teachers include ;<br>1. Dr. Mohammed Farooq<br>2. Dr. (Smt.) B. C. Patil<br>3. Dr. Shashikumar S.<br>4. Dr. R. S. Hiremath<br>5. Dr. G. Basavaraj<br>In view of facts mentioned above, Board directed the University to issue promotion orders to those eligible teachers as put up in the agenda (except Sl. No. 1 to 5 mentioned above)<br>**(Action: Registrar)** |
| ಕಾರ್ಯಸೂಚಿ ಸಂ. 8 | ಸಿ.ಎ.ಎಸ್.2006 ರ ಅಡಿಯಲ್ಲಿ ಶಿಕ್ಷಕರನ್ನು ಪ್ರಾಧ್ಯಾಪಕರಿಂದ ಪ್ರಾಧ್ಯಾಪಕ (ಹೆಚ್‌ಎಜಿ)ಗೆ ಉನ್ನತೀಕರಿಸಲು ಅನುಮೋದನೆಗಾಗಿ ಕುರಿತು. |
| **Item No.8** | **Approval for up-gradation of teachers from Professor to Professor (HAG) under CAS-2006 Scheme.** |
| | ಚರ್ಚೆ ಮತ್ತು ಠರಾವು :<br>**Discussion and Resolution :**<br>ಈ ವಿಷಯವಾಗಿ ಚರ್ಚೆಸುತ್ತಾ, ಕಾರ್ಯಸೂಚಿ ಸಂ. 7 ರ ಮಾದರಿಯಲ್ಲಿ ಸೀಲು ಮಾಡಿರುವ ಲಕೋಟೆಯನ್ನು ತೆರೆಯಲಾಯಿತು ಮತ್ತು ಸದಸ್ಯರುಗಳ ಗಮನಕ್ಕೆ ತರಲಾಯಿತು. ಚರ್ಚೆಯ ನಂತರ, ಕಾರ್ಯಸೂಚಿಯಲ್ಲಿ ಮಂಡಿಸಿದಂತೆ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕ (ಹೆಚ್‌ಎಜಿ)ಗೆ ಉನ್ನತೀಕರಿಸಲು ಮತ್ತು ಕಾಯ್ದಿರಿಸಿದ ಪಟ್ಟಿಗೆ ಮಂಡಳಿಯು ತನ್ನ ಅನುಮೋದನೆ ನೀಡಿತು. ಆರ್ಥಿಕ ಸೌಲಭ್ಯವನ್ನು ಹಿಂದಿನ ದಿನಾಂಕದಿಂದ ಅಂದರೆ ಅರ್ಹತಾ ದಿನಾಂಕದಿಂದ ಅಥವಾ ಮುಂದಿನ ದಿನಾಂಕದಿಂದ ಅಂದರೆ ಕಾರ್ಯನಿರ್ವಹಣಾ ವರದಿ ಸಲ್ಲಿಸಿದ ದಿನಾಂಕದಿಂದ ವಿಸ್ತರಿಸುವ ಕುರಿತು ಚರ್ಚೆಯಾಯಿತು. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಸೌಲಭ್ಯವನ್ನು ಕಾರ್ಯನಿರ್ವಹಣಾ ವರದಿ ಸಲ್ಲಿಸಿದ ದಿನಾಂಕದಿಂದ ವಿಸ್ತರಿಸುವ ಕುರಿತು ಅಭಿಪ್ರಾಯ ತಿಳಿಸಿದರು. ಮುಂದುವರೆದು, (ಸಿಎಎಸ್ ನಿಯಮ 1.3) ರ ಅನುಸಾರ ಹುದ್ದೆಗಳ ಖಾಲಿಯಾದ ದಿನಾಂಕದಿಂದ ಅನ್ವಯವಾಗುವಂತೆ ಉನ್ನತೀಕರಿಸಲು ಅವಕಾಶವಿರುತ್ತದೆ ಎಂದು ಅಧ್ಯಕ್ಷರು ಸ್ಪಷ್ಟಪಡಿಸಿದರು.<br><br>There was a discussion about this issue. Similar to the item No.7, sealed cover was opened and shown to the members. After discussion, Board has approved the list of the professors who have been enlisted in the agenda for up-gradation from Professor to Professor (HAG) and also for wait list. The issue regarding extending the financial benefits prospectively or retrospectively surfaced during the discussion. The Secretary to the Government expressed his opinion to extend the financial benefits prospectively. Further, Chairman, BOM clarified that, there is a provision to extend same benefit to those senior Professors, as and when vacancies are arises (Clause No. 1.3 of CAS regulations). The details are as under ; |

| Sl. No. | Name of the Teacher | Persons eligible in place of | Date of effect |
|---|---|---|---|
| 1 | Dr. K. M. Indiresh, Professor and Vice Chancellor UHS, Bagalkot. | Dr. J. Venkatesh (Retired on July, 2016) | August, 2016 |
| 2 | Dr. K. N. Kattimani, Professor of Medicinal and Aromatic Plants and Registrar, UHS, Bagalkot. | Dr. V. Nache Gowda (Retired on May, 2018) | June, 2018 |
| 3 | Dr. M. S. Kulkarni, Professor and Dean Postgraduate Studies, UHS, Bagalkot. | Dr. H. B. Lingaiah (Retired on July, 2018) | August, 2018 |
| 4 | Dr. Y. K. Kotikal, Professor and Director of Extension, UHS, Bagalkot. | Dr. K. M. Indiresh (Retired on July, 2018) | August, 2020 |
| 5 | Dr. S. I. Athani, Professor and Dean, Students Welfare, UHS, Bagalkot. | **To be kept in wait list** | |
| 6 | Dr. N. K. Hegde, Professor and Dean, COH, Sirsi. | | |

ಮುಂದುವರೆದು, ಅರ್ಹ ಪ್ರಾಧ್ಯಾಪಕರುಗಳಿಗೆ ಪ್ರಾಧ್ಯಾಪಕರು (ಹೆಚ್‌ಎಜಿ)ಗೆ ಆದೇಶಗಳನ್ನು ಹೊರಡಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.

Further, Board directed the University to issue the promotion orders to the eligible Professors eligible for Professor (HAG).

**(ಕ್ರಮ: ಕುಲಸಚಿವರು/Action: Registrar)**

| | |
|---|---|
| **ಕಾರ್ಯಸೂಚಿ ಸಂ. 9** | **ಸೇವಾ ಸಿಬ್ಬಂದಿಗಳ ಪದೋನ್ನತಿ (ಉಪ ಆಡಳಿತಾಧಿಕಾರಿಗಳು, ಉಪ ಹಣಕಾಸು ನಿಯಂತ್ರಣಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಅಭಿಯಂತರರು ಹುದ್ದೆಗಳಿಗೆ)** |
| | **ಚರ್ಚೆ ಮತ್ತು ಠರಾವು :** ಸುದೀರ್ಘ ಚರ್ಚೆಯ ನಂತರ, ತೋವಿವಿಯ ಬಾಗಲಕೋಟೆಯ ಪ್ರಸ್ತಾಪಿತ ಪರಿನಿಯಮಗಳು ಅನುಮೋದನೆಗೊಳ್ಳುವವರೆಗೆ ಪದೋನ್ನತಿಗಳನ್ನು ನೀಡುವುದನ್ನು ಕಾಯಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿತು. ಕಾರ್ಯಸೂಚಿಯಲ್ಲಿ ಪಟ್ಟಿ ಮಾಡಲಾದ ಸೇವಾ ಸಿಬ್ಬಂದಿಗಳನ್ನು ವಾಡಿಕೆಯಂತೆ ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗ ಅನುಸಾರ ಪರಿಶೀಲಿಸಿಲಾಗಿದೆ ಎಂದು ಅಧ್ಯಕ್ಷರು ಮತ್ತು ಸದಸ್ಯರು ಮಂಡಳಿಯ ಗಮನಕ್ಕೆ ತಂದರು. ಮುಂದುವರೆದು, ಉಪ ಹಣಕಾಸು ನಿಯಂತ್ರಣಾಧಿಕಾರಿಗಳು ಮತ್ತು ಉಪ ಕುಲಸಚಿವರು / ಉಪ ಆಡಳಿತಾಧಿಕಾರಿಗಳು ಪದೋನ್ನತಿಗೆ ಸಂಬಂಧಿತ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ತರಲು ನಿರ್ಧರಿಸಲಾಯಿತು. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹುದ್ದೆಯಿಂದ ಕಾರ್ಯನಿರ್ವಾಹಕ ಅಭಿಯಂತರರು ಹುದ್ದೆಗೆ ಪದೋನ್ನತಿ ನೀಡುವ ವಿಷಯವನ್ನು ಸುದೀರ್ಘವಾಗಿ ಚರ್ಚಿಸಲಾಯಿತು ಮತ್ತು ಪದೋನ್ನತಿಯನ್ನು ತಡೆಹಿಡಿಯಲು ಸಲಹೆ ನೀಡಲಾಯಿತು. ಅನ್ಯಾಯಕ್ಕೊಳಗಾದ ಅಭಿಯಂತರರು ಕೆಲವು ಸದಸ್ಯರುಗಳಿಗೆ ಮನವಿ ಸಲ್ಲಿಸಿರುವುದರಿಂದ ಹಾಗೂ ಸರ್ಕಾರದ ನಿರ್ದೇಶನದ ಹಿನ್ನೆಲೆಯಲ್ಲಿ, ಸರ್ಕಾರದ ಪರಿಶೀಲನೆಯಲ್ಲಿರುವ ವಿಶ್ವವಿದ್ಯಾಲಯದ ಪರಿನಿಯಮಗಳು (ಸಿ & ಆರ್) ಅನುಮೋದನೆ ಆಗುವವರೆಗೆ ಈ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು.<br><br>(ಕ್ರಮ: ಕುಲಸಚಿವರು) |
| **Item No. 9** | **Promotion of Service Personnel (to the post of Deputy Administrative Officer, Deputy Comptroller and Executive Engineer)** |
| | **Discussion and Resolution :** After detailed deliberations, Board suggested the University to wait till the proposed **statutes** of UHS, Bagalkot is approved, so as to effect promotions. The Chairman and Member Secretary informed that, these personnel are enlisted in the agenda were screened as per the existing provisions of Cadre and Recruitment Regulations of the University in vogue. Further, it was suggested |

| | |
|---|---|
| | to bring item related to promotion to Deputy Comptroller and Deputy Registrar/Deputy Administrative Officer to the next meeting. The issue regarding promotion of engineers from Assistant Executive Engineer to Executive Engineers was discussed in length and suggested to withhold. This decision was taken in view of concern expressed by several members of BOM and as per the direction of the Government to whom aggrieved engineers have submitted representation till the common statutes (C & R) of the University is approved by the Government which is under consideration.<br>**(Action: Registrar)** |
| ಕಾರ್ಯಸೂಚಿ ಸಂ. 10 | ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕ ಹುದ್ದೆಗೆ ಪದೋನ್ನತಿ ಕುರಿತಂತೆ, ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತೋವಿವಿ, ಬಾಗಲಕೋಟೆಯಲ್ಲಿ ಅಳವಡಿಸುವ / ಪದೋನ್ನತಿ ಕುರಿತು. |
| | ಚರ್ಚೆ ಮತ್ತು ಠರಾವು :<br>ಈ ಕಾರ್ಯಸೂಚಿಯು ಸದಸ್ಯರಿಂದ ಸಾಕಷ್ಟು ಗಮನ ಸೆಳೆದಿದೆ. ಕಾರ್ಯದರ್ಶಿಗಳು ಈ ಕಾರ್ಯಸೂಚಿಯನ್ನು ಮುಂದೂಡಲು ಸಲಹೆ ನೀಡಿದರು. ಆದರೆ, ಹಲವಾರು ಸದಸ್ಯರುಗಳು ಇತರ ಶಿಕ್ಷಕೇತರ ಸಿಬ್ಬಂದಿಗಳು ನೇರವಾಗಿ ವಿಶ್ವವಿದ್ಯಾಲಯದಲ್ಲಿ ಪದೋನ್ನತಿ ಪಡೆಯುವಂತೆ, ಈ ಸಿಬ್ಬಂದಿಗಳಿಗೆ ಚಾಲ್ತಿಯಲ್ಲಿರುವ ಸಿ & ಆರ್ ನಿಯಮಾವಳಿಗಳಲ್ಲಿ ಪದೋನ್ನತಿ ಅವಕಾಶ ಇಲ್ಲದಿರುವ ಹಿನ್ನೆಲೆಯಲ್ಲಿ ಸದರಿ ಸಿಬ್ಬಂದಿಗಳ ಕಾರ್ಯನಿರ್ವಹಣಾ ಸ್ಥಿತಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.<br>ಆದ್ದರಿಂದ, ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಸದರಿ ಪ್ರಸ್ತಾವನೆಗೆ ತಮ್ಮ ಒಪ್ಪಿಗೆಯನ್ನು ಸೂಚಿಸುತ್ತಾ ರಾಜ್ಯ ವೇತನ ಶ್ರೇಣಿಯಲ್ಲಿ ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕ ಹುದ್ದೆಗೆ **ಕರ್ನಾಟಕ ಸರ್ಕಾರದ ಸಿಆಸುಇ ಮತ್ತು ಆರ್ಥಿಕ ಇಲಾಖೆಯ ಸಹಮತಿಯ ಷರತ್ತಿಗೆ ಒಳಪಟ್ಟು** ಭಾಗಶ: ಪ್ರಸ್ತಾವನೆಯನ್ನು ಮಂಡಳಿಯು ಅನುಮೋದನೆಯನ್ನು ನೀಡಿತು. ಮುಂದುವರೆದು, ಗ್ರಂಥಾಲಯ ಸಹಾಯಕರು ಯುಜಿಸಿ ವೇತನ ಶ್ರೇಣಿಗಾಗಿ ಮನವಿ ಮಾಡಿಕೊಳ್ಳುವುದಿಲ್ಲವೆಂದು ಮುಚ್ಚಳಿಕೆ ಪತ್ರವನ್ನು ನೀಡುವುದು. ಈ ರೀತಿಯ ಸೌಲಭ್ಯಗಳನ್ನು ವಿವಿಧ ವಿಶ್ವವಿದ್ಯಾಲಯಗಳಾದ ಕಪವೈಮೀವಿವಿ, ಬೀದರ, ದಾವಣಗೆರೆ ವಿಶ್ವವಿದ್ಯಾಲಯ ಮತ್ತು ಕೃವಿವಿ, ಧಾರವಾಡದಲ್ಲಿ ವಿಸ್ತರಿಸಲಾಗಿರುತ್ತದೆ.<br>(ಕ್ರಮ: ಕುಲಸಚಿವರು) |
| **Item No. 10** | **Approval for amendment to the adopted Cadre and Recruitment Regulations of UAS, Dharwad pertaining to promotion of Library Assistant to Assistant Librarian and according promotions at UHS, Bagalkot.** |
| | **Discussion & Resolution :**<br>The item has received lot of attention from the members of BOM. The Secretary, GoK suggested to defer the item. But, most of the members expressed their concern regarding the state of affair of these staff, in view of fact that, there are no promotional avenues in the existing C & R or they can be directly promoted as that of other service personnel in the University.<br>Hence, majority of members gave consent for proposal and approved in principle to promote them from Library Assistant to Assistant Librarian in the State Pay Scales, subject to the **concurrence of DPAR and FD, GoK.** Further, the Library Assistants have to give an undertaking that they will not claim for UGC pay scales. Similarly, benefits have been extended in various Universities viz., KVAFSU, Bidar and Davanagere University and UAS, Dharwad.<br>**(Action: Registrar)** |

<table>
<tr><td>ಕಾರ್ಯಸೂಚಿ<br>ಸಂ. 11</td><td>ತೋವಿವಿ, ಬಾಗಲಕೋಟೆಯ ತಾಂತ್ರಿಕ ಸಹಾಯಕ ಮತ್ತು ಸಮಾನಾಂತರ ಹುದ್ದೆಗಳಿಗೆ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಕರಡು ನಿಯಮಾವಳಿಗಳನ್ನು ಅಳವಡಿಸುವ ಕುರಿತು</td></tr>
<tr><td></td><td>ಚರ್ಚೆ ಮತ್ತು ಠರಾವು :<br><br>ಈ ಕಾರ್ಯಸೂಚಿಯನ್ನು ವಿವರವಾಗಿ ಚರ್ಚಿಸಲಾಯಿತು. ಸರ್ಕಾರದ ಕಾರ್ಯದರ್ಶಿಗಳು ಈ ಕಾರ್ಯಸೂಚಿಯನ್ನು ಮುಂದೂಡಲು ಸಲಹೆ ನೀಡಿದರು. ಆದರೆ, ತಾಂತ್ರಿಕ ಸಹಾಯಕರುಗಳಿಗೆ ಐಸಿಎಆರ್, ಕರ್ನಾಟಕ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ವಿವಿಧ ಸಂಸ್ಥೆಗಳಲ್ಲಿ ಪದೋನ್ನತಿ ನೀಡುವ ಬಗ್ಗೆ ಇದೇ ರೀತಿಯ ನಿಯಮಗಳನ್ನು ರಚಿಸಲಾಗಿರುವ ಕುರಿತು ಕೆಲವು ಸದಸ್ಯರುಗಳು ವಾಸ್ತವಿಕತೆಗಳನ್ನು ಸಭೆಗೆ ತಿಳಿಸಿದರು. ಮುಂದುವರೆದು, ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಸಹಾಯಕರುಗಳು ತಮ್ಮನ್ನು ಬಿಟ್ಟು ಶಿಕ್ಷಕರುಗಳಿಗೆ ಮತ್ತು ಶಿಕ್ಷಕೇತರ ಸಿಬ್ಬಂದಿಗಳಿಗೆ ಪದೋನ್ನತಿ ಸೌಲಭ್ಯಗಳನ್ನು ನೀಡುತ್ತಿರುವುದನ್ನು ಮನವಿ ಮೂಲಕ ತಿಳಿಸಿರುತ್ತಾರೆ. ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಕೆಲವು ಸದಸ್ಯರುಗಳು ಕೃವಿವಿ, ಧಾರವಾಡ ಮತ್ತು ಬೆಂಗಳೂರಿನಲ್ಲಿ ವಿಸ್ತರಿಸಿದಂತೆ, ತೋವಿವಿ, ಬಾಗಲಕೋಟೆಯ ತಾಂತ್ರಿಕ ಸಹಾಯಕ ಮತ್ತು ಸಮಾನಾಂತರ ಹುದ್ದೆಗಳಿಗೆ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಕರಡು ನಿಯಮಾವಳಿಗಳನ್ನು ಅಳವಡಿಸುವ ಕುರಿತು ಒಪ್ಪಿಗೆ ಸೂಚಿಸಿರುತ್ತಾರೆ.<br><br>(ಕ್ರಮ: ಕುಲಸಚಿವರು)</td></tr>
<tr><td>Item No. 11</td><td>Adoption of draft regulations governing recruitment and promotion of Technical Assistant & Equivalent posts in UHS, Bagalkot-reg.</td></tr>
<tr><td></td><td>Discussion & Resolution :<br>The item was discussed in detail. The Secretary, GoK suggested to defer the item. But, some of the members have brought realities regarding promotions to be effected for Technical Assistants; as similar promotional avenues have been created for Technical Assistants in various institutes of ICAR, Farm Universities of Karnataka. Further, the Technical Assistants working in the University have represented that, both teachers and service personnels are being given the benefits of promotion, except themselves. In view of these facts, many members agreed to adopt regulations governing recruitment and promotion of Technical Assistants and equivalent posts in UHS, Bagalkot as extended in the UAS, Dharwad and Bangalore.<br><br>(Action: Registrar)</td></tr>
<tr><td>ಕಾರ್ಯಸೂಚಿ<br>ಸಂ. 11</td><td>ತೋವಿವಿ, ಬಾಗಲಕೋಟೆಯ ಅಭಿಯಂತರರನ್ನು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ (BTDA)ಕ್ಕೆ ನಿಯೋಜಿಸುವ ಕುರಿತು.</td></tr>
<tr><td></td><td>ಚರ್ಚೆ ಮತ್ತು ಠರಾವು :<br>ಮಂಡಳಿಯು ಕಾರ್ಯಸೂಚಿ ಪರಿಶೀಲಿಸಿತು ಮತ್ತು ಚರ್ಚಿಸಿ, ಕಾರ್ಯಸೂಚಿ ಮಂಡಿಸಿದಂತೆ, ಶ್ರೀ ರಾಜು ಜಿ. ಅವರಾದಿ, ಕಿರಿಯ ಅಭಿಯಂತರು (ಸಿವಿಲ್) ಮತ್ತು ಶ್ರೀ ಮೋಹನ ವಾಯ್. ಸುಳ್ಳದ, ಸಹಾಯಕ ಅಭಿಯಂತರು (ವಿದ್ಯುತ್) ಇವರುಗಳನ್ನು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರಕ್ಕೆ ನಿಯೋಜಿಸಲು ತನ್ನ ಅನುಮೋದನೆ ನೀಡಿತು. ಮುಂದುವರೆದು, ಮಂಡಳಿಯು ಈ ಕುರಿತು ಆದೇಶವನ್ನು ಹೊರಡಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>(ಕ್ರಮ: ಕುಲಸಚಿವರು)</td></tr>
</table>

| | |
|---|---|
| **Item No. 12** | **Deputation of Engineers of UHS, Bagalkot to Bagalkote Town Development Authority (BTDA).** |
| | **Discussion & Resolution :**<br>The Board went through the agenda and deliberations, has accorded its approval for deputation of Engineers viz., Mr. Raju G. Awaradi, Junior Engineer (Civil) and Sri. Mohan Y. Sullad, Assistant Engineer (Electrical) to Bagalkote Town Development Authority (BTDA) as put up in the agenda. Further, Board directed the University to issue order in this regard.<br>**(Action: Registrar)** |
| ಕಾರ್ಯಸೂಚಿ ಸಂ. 13 | ತೋಟಗಾರಿಕೆ ಮಹಾವಿದ್ಯಾಲಯ ಮೈಸೂರನಲ್ಲಿ ಮುಖ್ಯ ಆಡಳಿತ ಕಟ್ಟಡ (ಮುಂಭಾಗ) ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು. |
| ಕಾರ್ಯಸೂಚಿ ಸಂ. 14 | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯ ಅಡಿಯಲ್ಲಿ ಬರುವ ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ ದೇವಿಹೊಸೂರ (ಹಾವೇರಿ) ಆವರಣದಲ್ಲಿ ವಿದ್ಯಾರ್ಥಿಗಳ ವಸತಿ ನಿಲಯದ (ನೆಲ ಮಹಡಿ) ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು. |
| ಕಾರ್ಯಸೂಚಿ ಸಂ. 15 | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯ ಅಡಿಯಲ್ಲಿ ಬರುವ ತೋಟಗಾರಿಕೆ ಮಹಾವಿದ್ಯಾಲಯ ಮೈಸೂರ ಆವರಣದಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯದ (ಎರಡನೇಯ ಮಹಡಿ) ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು. |
| ಕಾರ್ಯಸೂಚಿ ಸಂ. 16 | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯ ಮುಖ್ಯ ಆವರಣದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯದ ಮೊದಲನೇಯ ಮಹಡಿ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು. |
| ಕಾರ್ಯಸೂಚಿ ಸಂ. 17 | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯ ಮುಖ್ಯ ಆವರಣದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿನಿಯರಿಗಾಗಿ ವಸತಿ ನಿಲಯದ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು ಕಾರ್ಯಸೂಚಿ ಸಂ. 13 ರಿಂದ 17 ಗಳನ್ನು ಪರಿಶೀಲಿಸಿ ಮತ್ತು ಚರ್ಚಿಸಿದ ನಂತರ, ಈ ನಿಟ್ಟಿಯಲ್ಲಿ ಸರ್ಕಾರದಿಂದ ಆರ್‌ಐಡಿಎಫ್ (ನಬಾರ್ಡ್) ಯೋಜನೆಯ ಅಡಿಯಲ್ಲಿ ಅನುದಾನ ಮಂಜೂರಾತಿ ನಿರೀಕ್ಷೆಯಲ್ಲಿ ಅನುಮೋದನೆ ನೀಡಿತು. ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲರವರು ಸದರಿ ಕಟ್ಟಡಗಳ ಅಂದಾಜುಗಳ ಮೇಲೆ ಯೋಜನೆಯನ್ನು ತಯಾರಿಸಲು ವಾಸ್ತುಶಿಲ್ಪಿಗಳಿಗೆ ನೀಡುವ ಶೇಕಡ ಮೊತ್ತದ ಬಗ್ಗೆ ಮಾಹಿತಿ ಕೇಳಿದರು. ಇದಕ್ಕೆ ಸದಸ್ಯ ಕಾರ್ಯದರ್ಶಿಗಳು ಸದರಿ ಅವಶ್ಯಕ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ನೀಡಲಾಗುವುದು ಎಂದು ತಿಳಿಸಿದರು.<br>(ಕ್ರಮ: ಆಸ್ತಿ ಅಧಿಕಾರಿಗಳು) |
| **Item No. 13** | **Construction of Second Floor of Main Administrative Building (front portion) at College of Horticulture, Mysore.** |
| **Item No. 14** | **Construction of boys hostel (ground floor) at College of Horticultural Engineering and Food Technology, Devihosur (Haveri).** |
| **Item No. 15** | **Construction of second floor of Girls Hostel at College of Horticulture, Mysore.** |
| **Item No. 16** | **Construction of P.G. Boys Hostel (first floor) at Main Campus, University of Horticultural Sciences, Bagalkot.** |
| **Item No. 17** | **Construction of P.G Girl's Hostel at Main Campus, University of Horticultural Sciences, Bagalkot.** |

| | |
|---|---|
| | **Discussion & Resolution :**<br>Board went through the items No. 13 to 17 and after deliberations, has accorded its approval in anticipation of sanction of grants from Government of Karnataka under RIDF (NABARD) in this regard. Further, Dr. Y. B. Patil, Hon'ble member sought the information regarding percentage of amount of estimation of building to be paid to the architecture for planning. The Member Secretary informed that, the necessary information will be provided in the next meeting.<br>**(Action: Estate Officer)** |
| **ಕಾರ್ಯಸೂಚಿ ಸಂ. 18** | **ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟ ಹಾಗೂ ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರಿನಲ್ಲಿ ಡಿಪ್ಲೋಮಾ ತರಬೇತಿ ಕಾರ್ಯಕ್ರಮವನ್ನು ಮುಚ್ಚುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಈ ವಿಷಯವು ಚರ್ಚಿಸಲಾಯಿತು ಮತ್ತು ಮಂಡಳಿಯು 1) ಸರ್ಕಾರವು ಈ ಉದ್ದೇಶಕ್ಕಾಗಿ ಹಣಕಾಸಿನ ಮಂಜೂರಾತಿ ನೀಡದಿರುವುದರಿಂದ, ಹಣಕಾಸಿನ ಸಂಪನ್ಮೂಲಗಳ ಕೊರತೆ, 2) ವಾಸ್ತವ್ಯ ಕೊರತೆ ಮತ್ತು 3) ಬೋಧಕರುಗಳ ಕೊರತೆ ಹಿನ್ನೆಲೆಯಲ್ಲಿ, ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟೆ ಮತ್ತು ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರಿನಲ್ಲಿ ಡಿಪ್ಲೋಮಾ ಕೋರ್ಸ್‌ನ್ನು ಸ್ಥಗಿತಗೊಳಿಸಲು ತನ್ನ ಅನುಮೋದನೆ ನೀಡಿತು. ಮುಂದುವರೆದು, ನಾಲ್ಕು ಕೇಂದ್ರಗಳ ಬದಲಾಗಿ ಎರಡು ಕೇಂದ್ರಗಳಲ್ಲಿ ಮುಂದುವರೆಸಲು ಅನುಕೂಲವಾಗುವಂತೆ ವಿಶ್ವವಿದ್ಯಾಲಯ ವಿಮರ್ಶಣಾ ಆಯೋಗವು ಕೂಡ ಸದರಿ ಕೋರ್ಸ್‌ನ್ನು ಕೆಲವು ಆವರಣಗಳಲ್ಲಿ ಸ್ಥಗಿತಗೊಳಿಸಲು ಸಲಹೆ ನೀಡಿರುತ್ತದೆ.<br>(ಕ್ರಮ: ಕುಲಸಚಿವರು) |
| **Item No.18** | **Closing the Diploma Programme at COH, Bagalkot and COH, Bengaluru.** |
| | **Discussion & Resolution :**<br>The subject was discussed and Board has accorded its approval to close the Diploma Programme at COH, Bagalkot and COH, Bengaluru, in view of; 1) acute shortage of financial resources, as Government is not sanctioning grants for this purpose, 2) shortage of accommodation, 3) Scarcity of faculty. Further, University Review Commission also suggested for discontinuation of diploma courses in some of the campuses, so as to continue the programme in two centres instead of four centres.<br>**(Action: Registrar)** |
| **ಕಾರ್ಯಸೂಚಿ ಸಂ. 19** | **ತೋವಿವಿ, ಬಾಗಲಕೋಟೆಯಿಂದ ಕೃತೋವಿವಿ, ಶಿವಮೊಗ್ಗಕ್ಕೆ ತೈನಾತೀಕರಣದ (REPATRIATION) ಮೇಲೆ ಶಿಕ್ಷಕರನ್ನು ವರ್ಗಾವಣೆ ಮಾಡುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಈ ಕುರಿತು ಸರ್ಕಾರದ ಮಟ್ಟದಲ್ಲಿ ಕೆಲವು ಸ್ಪಷ್ಟೀಕರಣಗಳ ಅಪೇಕ್ಷೆಗಾಗಿ ಸದರಿ ಪ್ರಸ್ತಾವನೆಯನ್ನು ಮುಂದಿನ ಸಭೆಗೆ ಮುಂದೂಡಲಾಯಿತು. ಡಾ. ಹೆಚ್. ಎನ್. ಖೇರ ಮತ್ತು ಡಾ. ವೈ. ಬಿ. ಪಾಟೀಲ ಇವರಿಬ್ಬರು ತೈನಾತೀಕರಣದ ಮೇಲೆ ವರ್ಗಾವಣೆಗೊಂಡ ಶಿಕ್ಷಕರುಗಳ ಬಗ್ಗೆ ಒಮ್ಮತ ವ್ಯಕ್ತಪಡಿಸಿದರು. ಹೊಸ ವಿಶ್ವವಿದ್ಯಾಲಯವನ್ನು ರಚಿಸಿದಾಗ, ಶಿಕ್ಷಕರು ಮಾತೃ ವಿಶ್ವವಿದ್ಯಾಲಯದಿಂದ ಹೊಸ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಳ್ಳುವ ಅವಕಾಶವನ್ನು ಹೊಂದಿರುತ್ತಾರೆ, ಇದನ್ನು ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ ಸ್ಥಾಪಿಸಲು ಕೂಡ ಸದರಿ ಅವಕಾಶವನ್ನು ಮಾಡಲಾಗಿತ್ತು. ಇದರಿಂದಾಗಿ, ಕಾರ್ಯಸೂಚಿಯ ಪಟ್ಟಿಯಲ್ಲಿ ತಿಳಿಸಿರುವ ಶಿಕ್ಷಕರುಗಳು ತೈನಾತೀಕರಣಕ್ಕೆ ಇಚ್ಚಿಸಿರುತ್ತಾರೆ ಎಂದು ಡಾ. ಹೆಚ್. ಎನ್. ಖೇರ ಇವರು ತಿಳಿಸಿದರು. ಆದಾಗ್ಯೂ, ಮಂಡಳಿಯು ಸದರಿ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮುಂದೂಡಿತು.<br>(ಕ್ರಮ: ಕುಲಸಚಿವರು |

| | |
|---|---|
| **Item No.19** | **Transfer of teachers from UHS, Bagalkote to UAHS, Shivamogga on repatriation.** |
| | **Discussion & Resolution :**<br>The agenda item was deferred to the next meeting for want of some clarifications at Government level. Both Dr. H. N. Kher and Dr. Y. B. Patil, Hon'ble members expressed their concern regarding teachers who have been transferred on repatriation. Dr. H. N. Kher categorically said that, when a new University is formed, there will be a provision for teachers to exercise their option to join new University from parent University, which has been incorporated in the Act that has enable to establish of University of Agriculture and Horticulture, Shivamogga. Accordingly, teachers enlisted in the agenda have opted for the same. In spite of this, Board deferred this item to the next meeting.<br>**(Action: Registrar)** |
| ಕಾರ್ಯಸೂಚಿ ಸಂ. 20 | ಶ್ರೀಮತಿ ಚಿತ್ರಾ ಪ್ಲೇವಿಯಾ ಫೆರ್ನಾಂಡೀಸ್, ಸಹಾಯಕ-ಗಣಕಯಂತ್ರ ನಿರ್ವಾಹಕರು, ತೋವಿವಿ, ಬಾಗಲಕೋಟ (ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿ ನಿಯೋಜನೆ ಮೇಲೆ) ಇವರನ್ನು ಎರಡು ವರ್ಷಗಳ ಕಾಲ ನಿಯೋಜನೆ ಅವಧಿ ವಿಸ್ತರಿಸುವ ಕುರಿತು. |
| | ಚರ್ಚೆ ಮತ್ತು ಠರಾವು :<br>ಈ ವಿಷಯವನ್ನು ಚರ್ಚಿಸಲಾಯಿತು ಮತ್ತು ಕಾರ್ಯಸೂಚಿಯಲ್ಲಿ ಮಂಡಿಸಿರುವಂತೆ ಮಂಡಳಿಯು ತನ್ನ ಅನುಮೋದನೆ ನೀಡಿತು. ಮುಂದುವರೆದು, ಕೆಸಿಎಸ್ಆರ್ ನಿಯಮಾವಳಿಗಳ ಅನುಸಾರ ಎರಡು ವರ್ಷಗಳ ಕಾಲ ನಿಯೋಜನೆ ಅವಧಿ ವಿಸ್ತರಿಸುವ ಕುರಿತು ಆದೇಶ ಹೊರಡಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ: ಕುಲಸಚಿವರು) |
| **Item No.20** | **Extension of deputation period of Smt. Chitra Flavia Fernades, Assistant–Cum-Computer Operator, UHS, Bagalkot.** |
| | **Discussion & Resolution :**<br>The subject was discussed and Board has accorded its approval as put in the agenda. Further, Board directed the University to issue order for extension of deputation period of two years as per the provisions of KCSR.<br>**(Action: Registrar)** |
| ಕಾರ್ಯಸೂಚಿ ಸಂ. 21 | ತೋವಿವಿ, ಬಾಗಲಕೋಟದ ಮುಖ್ಯ ಆವರಣ, ಎಲ್ಲ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರಗಳಲ್ಲಿ ರೂ.5.00 ಲಕ್ಷಗಳಿಗೆ ಮೀರದ ಕಾಮಗಾರಿಗಳನ್ನು ತುಂಡುಗುತ್ತಿಗೆಯಲ್ಲಿ ಕೈಗೊಳ್ಳಲು ಅನುಮೋದನೆ ನೀಡುವ ಕುರಿತು. |
| | ಚರ್ಚೆ ಮತ್ತು ಠರಾವು :<br>ಕಾರ್ಯಸೂಚಿಯಲ್ಲಿ ಲಗತ್ತಿಸಿರುವ ಸರ್ಕಾರದ ಆದೇಶ ಸಂ. ಗ್ರಾಅಪ 218 ಆರ್ಆರ್ಸಿ, 2018, ದಿನಾಂಕ 10.01.2020 ವು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ ಇಲಾಖೆಗೆ ಮಾತ್ರ ಸಂಬಂಧಪಟ್ಟಿರುವುದರಿಂದ, ಈ ಕಾರ್ಯಸೂಚಿಯನ್ನು ಅನುಮೋದನೆ ನೀಡಿರುವುದಿಲ್ಲ. ಮುಂದುವರೆದು, ರೂ. 5.00 ಲಕ್ಷಗಳಿಗೆ ಮೀರದ ಕಾಮಗಾರಿಗಳನ್ನು ತುಂಡುಗುತ್ತಿಗೆಯಲ್ಲಿ ಕೈಗೊಳ್ಳಲು ಕೆಟಿಪಿಪಿ ನಿಯಮಗಳನ್ನು ಅನುಸರಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ: ಕುಲಸಚಿವರು) |

| | |
|---|---|
| **Item No.21** | **Approval for execution of piece works at main campus and all colleges and research stations, UHS, Bagalkot not exceeding Rs. 5.00 lakhs.** |
| | **Discussion & Resolution :**<br><br>This item was not approved, since the G.O. ಗ್ರಾಅಪ 218 ಆರ್‌ಆರ್‌ಸಿ, 2018 No. dated 10.01.2020 enclosed with this agenda is related to only Rural Development and Panchayat Raj Department. Further, Board directed the University to follow the KTPP provisions in implementing the piece works contracts upto Rs. 5.00 lakhs.<br><br>**(Action: Estate Officer)** |
| ಕಾರ್ಯಸೂಚಿ ಸಂ. 22 | ಪ್ರವೇಶಾತಿ ಮತ್ತು ನೇಮಕಾತಿ ಉದ್ದೇಶಕ್ಕಾಗಿ ಸಸ್ಯರೋಗಶಾಸ್ತ್ರ, ಕೀಟಶಾಸ್ತ್ರ, ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ, ಅನುವಂಶಿಕ ಮತ್ತು ಸಸ್ಯ ತಳಿವೃದ್ಧಿಶಾಸ್ತ್ರ, ಜೈವಿಕ ತಂತ್ರಾಜ್ಞಾನ ಶಾಸ್ತ್ರ ವಿಷಯಗಳಲ್ಲಿ ಎಂ.ಎಸ್ಸಿ (ತೋಟಗಾರಿಕೆ) ಮತ್ತು ಪಿ.ಹೆಚ್.ಡಿ (ತೋಟಗಾರಿಕೆ) ಪದವಿಗಳನ್ನು ಈ ವಿಷಯಗಳಲ್ಲಿ ಎಂ.ಎಸ್ಸಿ (ಕೃಷಿ) ಮತ್ತು ಪಿ.ಹೆಚ್.ಡಿ (ಕೃಷಿ) ಪದವಿಗಳಿಗೆ ಸಮಾನಾಂತರ ಪದವಿಗಳೆಂದು ಪರಿಗಣಿಸುವ ಕುರಿತು. |
| | ಚರ್ಚೆ ಮತ್ತು ಠರಾವು :<br><br>ಎಂ. ಎಸ್ಸಿ. (ತೋಟಗಾರಿಕೆ) ನಾಮಕರಣವನ್ನು ಬದಲಾಯಿಸುವ ವಿಷಯದ ಬಗ್ಗೆ ಸುದೀರ್ಘ ಚರ್ಚೆಯಾಯಿತು. ಸ್ನಾತಕೋತ್ತರ ಪದವಿ ಕಾರ್ಯಕ್ರಮದಲ್ಲಿ ತೋಟಗಾರಿಕೆ ಮತ್ತು ಸ್ನಾತಕ ಪದವಿಯಲ್ಲಿ ಕೃಷಿ ಸೂಕ್ತವಲ್ಲ ಎಂದು ಕೆಲವು ಸದಸ್ಯರುಗಳು ಅಭಿಪ್ರಾಯಪಟ್ಟು, ಸದಸ್ಯ ಕಾರ್ಯದರ್ಶಿಗಳು, ಈ ವಿಷಯವನ್ನು ಅಧ್ಯಯನ ಮಂಡಳಿ ಮತ್ತು ಶೈಕ್ಷಣಿಕ ಪರಿಷತ್‌ನ ಶಿಫಾರಸ್ಸುಗಳ ಅವಶ್ಯ ಇದೆ ಎಂದು ಮಂಡಳಿಯ ಗಮನಕ್ಕೆ ತಂದರು. ಮುಂದುವರೆದು, ವಿಶ್ವವಿದ್ಯಾಲಯದ ಅಧಿಕಾರಿಗಳೊಂದಿಗೆ ವಿದ್ಯಾರ್ಥಿಗಳ ಪ್ರತಿನಿಧಿಯೊಂದಿಗೆ ಸಭೆ ನಡೆಸಬೇಕು ಮತ್ತು ವಿದ್ಯಾರ್ಥಿಗಳ ಕಲ್ಯಾಣದ ಹಿತದೃಷ್ಟಿಯಿಂದ ಸದಸ್ಯೆಯನ್ನು ಆದಷ್ಟು ಬೇಗ ಪರಿಹರಿಸಬೇಕೆಂದು ಸರ್ಕಾರದ ಕಾರ್ಯದರ್ಶಿಗಳು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿದರು.<br><br>(ಕ್ರಮ: ಕುಲಸಚಿವರು) |
| **Item No.22** | **Proposal to equate the M.Sc. (Hort.) & Ph.D. degree in allied subjects like Plant Pathology, Entomology, Soil Science and Agriculture Chemistry, Genetics and Plant Breeding, Plant Biotechnology, on par with M.Sc. (Agri.) & Ph.D. in respective subjects for the purpose of admission and recruitment.** |
| | **Discussion & Resolution :**<br>There was a lengthy discussion and deliberation on this issue to change the nomenclature of M.Sc. (Hort.) in allied subjects. Some of the Members opined that, it is not relevant to have horticulture in bachelor degree programme and master in agriculture. The Member Secretary invited the attention of Board that, the issue needs recommendations of both Board of Studies and Academic Council. Further, Secretary suggested the University to have a meeting with representative of students concern along with University officers and to resolve the issue as early as possible in the interest of the students' welfare.<br><br>**(Action: Registrar)** |

| | ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು<br>**Any other subjects with permission of the Chair** |
|---|---|
| **1.** | ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲರವರು ವಿಶ್ವವಿದ್ಯಾಲಯದ ಅಧಿಕಾರಿಗಳ ಪ್ರಭಾರ ವ್ಯವಸ್ಥೆಯನ್ನು ಬದಲಿಸುವ (rotation) ಬಗ್ಗೆ ಕೇಳಿದರು. ವಿಶ್ವವಿದ್ಯಾಲಯದಲ್ಲಿ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ ಮತ್ತು ಕಾರ್ಯವಿಧಾನಗಳನ್ನು ಅನುಸರಿಸುವ ಮೂಲಕ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಅಧ್ಯಕ್ಷರು ಮಂಡಳಿಗೆ ಮಾಹಿತಿ ನೀಡಿದರು. ಗೌರವಾನ್ವಿತ ಸದಸ್ಯರಾದ ಡಾ. ಹೆಚ್. ಎನ್. ಖೇರ ಇವರು ಜೇಷ್ಠತಾ ಆಧಾರದ ಮೇಲೆ ಪ್ರಭಾರ ವ್ಯವಸ್ಥೆಗಳನ್ನು ಮಾಡಲು ಸಲಹೆ ನೀಡಿದರು. ಸರ್ಕಾರದ ಕಾರ್ಯದರ್ಶಿಗಳು, ಪ್ರಭಾರ ವ್ಯವಸ್ಥೆಗಳಿಂದ ಸಾಕಷ್ಟು ಆರ್ಥಿಕ ಪರಿಣಾಮ ಬೀರುತ್ತದೆ ಎಂದು ಸಭೆಗೆ ತಿಳಿಸಿದರು. ವಿಶ್ವವಿದ್ಯಾಲಯದ ಯಾವುದೇ ಅಧಿಕಾರಿಗಳಿಗೆ ಶೇ. 7.5 % ಪ್ರಭಾರ ಭತ್ಯೆ ನೀಡುತ್ತಿಲ್ಲ, ಅಲ್ಲದೇ, ಡೀನ್ ಮತ್ತು ನಿರ್ದೇಶಕರುಗಳಿಗೆ ಕೊಡಲ್ಪಡುವ ಪ್ರತಿ ತಿಂಗಳಿಗೆ ರೂ. 3000/– ಮತ್ತು ವಿಶೇಷ ಅಧಿಕಾರಿಗಳಿಗೆ ಪ್ರತಿ ತಿಂಗಳಿಗೆ ರೂ. 2000/– ವಿಶೇಷ ಭತ್ಯೆಯನ್ನು ಸಹ ಆರ್ಥಿಕ ಸಂಪನ್ಮೂಲಗಳು ಕ್ಷೀಣಿಸುತ್ತಿರುವ ದೃಷ್ಟಿಯಿಂದ ಹಿಂಪಡೆಯಲಾಗಿದೆ ಎಂದು ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಸ್ಪಷ್ಟಪಡಿಸಿದರು. |
| | Hon'ble member Dr. Y. B. Patil, sought the information about the in-charge arrangements of Officers in the University on rotation basis. The Chairman informed the Board that, the process of recruitment of officers in the University is under progress and Officers posts will be filled-up shortly by following procedures. Dr. H. N. Kher, Hon'ble member advised the University to make in-charge arrangements based on seniority. The Secretary, GOK expressed his concern that, in-charge arrangements will have a lot of financial implications. The Chairman and Member Secretary have clarified that, no officers in the University have been given charge allowances of @ 7.5 % pm, rather charge allowance @ Rs. 3000/- pm Deans and Directors, @ Rs. 2000/- pm Special Officers are in vogue have been withdrawn, in view of dwindling financial resources. |
| **2.** | ಗೌರವಾನ್ವಿತ ಸದಸ್ಯರಾದ ಡಾ. ಹೆಚ್. ಎನ್. ಖೇರ ಇವರು ಏಕರೂಪದ ಪರಿನಿಯಮಗಳ ಕುರಿತು ಸ್ಪಷ್ಟೀಕರಣವನ್ನು ಕೋರಿದರು. ತೋವಿವಿ, ಬಾಗಲಕೋಟೆಯು ಪ್ರತ್ಯೇಕ ಅಧಿನಿಯಮವನ್ನು ಹೊಂದಿದ್ದು ಮತ್ತು ಪದವಿ ಕಾರ್ಯಕ್ರಮಗಳ ನಾಮಕರಣ ಮತ್ತು ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸಗಳನ್ನು ಹೊರತುಪಡಿಸಿ ಕರ್ನಾಟಕದ ಎಲ್ಲ ಕೃಷಿ ವಿಶ್ವವಿದ್ಯಾಲಯಗಳ ಏಕರೂಪದ ಪರಿನಿಯಮಗಳಂತೆ ಪ್ರತ್ಯೇಕ ಪರಿನಿಯಮವನ್ನು ಹೊಂದಿರಲಿದೆ ಎಂದು ಅಧ್ಯಕ್ಷರು ತಿಳಿಸಿದರು. |
| | Hon'ble member, Dr. H. N. Kher sought the clarification about the common statues of the University. The Chairman informed that, UHS, Bagalkot having a separate Act, will have separate statutes which is almost similar to common statues of all farm Universities of Karnataka, except difference with respect to nomenclature of degree programmes and academic matter. |

ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The meeting was concluded with the vote of thanks.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ

**Registrar & Member Secretary**
**Board of Management, UHS, Bagalkot**